REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 7 | APRIL - 2024

# ‘ಚಾಜ’ ನಾಟಕದ ಅವಲೋಕನ

ಡಾ. ಹನುಮಂತಪ್ಪ ಸಂಜೀವಣ್ಣನವರ
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ



ಕನ್ನಡದ ಅಧುನಿಕ ಸಂದರ್ಭದಲ್ಲಿ ಬೆಳೆದು ಬಂದ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಒಂದಾಗಿದೆ. ಕಥೆ, ಕಾವ್ಯ, ಕಾದಂಬರಿಗಳಷ್ಟು ವಿಫುಲವಾಗಿ ಬೆಳೆದು ಬರದಿದ್ದರೂ ಸಮಾಜದ ಹಿತದೃಷ್ಟಿಯಿಂದ ಈ ಪ್ರಕಾರವು ನೀಡುವ ಸಂದೇಶವು ಇತಿಹಾಸದಲ್ಲಿ ದಾಖಲಾಗುವಂತದ್ದಾಗಿದೆ. ಈ ಮಾತಿಗೆ ಪುಷ್ಟಿಯನ್ನುವಂತೆ ‘ಚಾಜ’ ನಾಟಕದ ಮುನ್ನಡಿಯಲ್ಲಿ ಉಲ್ಲೇಖಿಸಿದಂತೆ “ಕನ್ನಡದಲ್ಲಿ ನಾಟಕ ರಚನೆ ತುಂಬಾ ತಡವಾಗಿ ಆರಂಭವಾದರೂ ಆಧುನಿಕ ಕಾಲದಲ್ಲಿ ಅದು ಒದಗಿ ಬಂದ ಎಲ್ಲಾ ಬಗೆಯ ಒಲವುಗಳಿಗೆ ಮೈಗೊಟ್ಟು ವೈವಿಧ್ಯತೆಯನ್ನು ಸಾಧಿಸಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಎಂಬ ದೃಷ್ಟಿಧೋರಣೆಗಳನ್ನು ಅಳವಡಿಸಿಕೊಂಡು ಮೈದುಂಬಿ ನಿಂತಿದೆ. ಪ್ರಾಚೀನ–ಅರ್ವಾಚಿನ, ಕಾಲ್ಪನಿಕ–ವಾಸ್ತವಿಕ, ಪೌರಾಣಿಕ–ಜಾನಪದ ವಸ್ತುವೈವಿಧ್ಯ, ವಿಶಿಷ್ಟ ತಂತ್ರ, ನೈಪುಣ್ಯ ಶಿಷ್ಟರ ಜನಪದ ಹದವರಿ ಚಾಜ ನಾಟಕವನ್ನು ಕನ್ನಡದ ಹೆಸರಾಂತ ಸಾಹಿತಿಗಳು, ಚಿಂತಕರು, ಬರಹಗಾರರು ಆದ ಡಾ. ಮಲ್ಲಿಕಾ ಘಂಟಿಯವರು ರಚಿಸಿದ್ದಾರೆ. ಸಾಹಿತ್ಯ ಕೃತಿಯು ಓದುಗನಲ್ಲಿ ಸ್ಥಾನ ಪಡೆಯಬೇಕಾದರೆ ಅದರ ವಸ್ತು ಬಹಳ ಪ್ರಮುಖವಾದದು. ಇಲ್ಲಿ ವಿಸ್ತಾರ ಪಡೆಯುವ ವಸ್ತು ವಿವೇಚನೆಯೂ ಭಾರತೀಯರಿಗೆ ಕನ್ನಡದ ಸಂದರ್ಭದಲ್ಲಿ ಪರಿಚಯವಾದದ್ದಾಗಿದೆ. ಹೀಗಿದ್ದರೂ ನಾಟಕದ ರಚನಾ ವಿನ್ಯಾಸದಲ್ಲಿ ಅದರದ್ದೇ ಆದ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯರನ್ನು ಮನೋರಂಜನೆಯ ಮೂಲಕ ಆಹ್ಲಾದಗೊಳಿಸಿಲಿಕ್ಕೆ ಹವ್ಯಾಸಿ ಕಲಾವಿದರು ಆಟ, ನಾಟಕಗಳನ್ನು ಆಡುವ ಸಂಪ್ರದಾಯವನ್ನು ಕಾಣುತ್ತೇವೆ. ಈ ವಿಚಾರವನ್ನು ಮುದುಕನ ಪಾತ್ರ ಹುಡುಗನಿಗೆ ಹೇಳುತ್ತದೆ. ಆಗ ಹುಡುಗನು ಅಜ್ಜ ನಾವು ನಾಟಕ ಆಡುವ ಹುಮ್ಮಸ್ಸಿನಲ್ಲಿದ್ದೇವೆ. ಆದರೆ ಕಲಿಸಲು ಮಾಸ್ತರರು ಸಿಗವಲ್ಲರು ಎಂದು ಹೇಳುತ್ತಾನೆ. ಮುದುಕನು‘ನಮ್ಮ ಊರಾಗ ಇರುವರು ನಿಮ್ಮ ಕಣ್ಣಿಗೆ ಕಾಣಿಸವಲ್ಲದೇನಪ್ಪಾ, ಹಿತ್ತಲದ ಗಿಡ ಮದ್ದಲ್ಲ ಸುತ್ತಲೂ ಏಳು ಹಳ್ಳಿಯವರು ಆಟ ಕಲಿಸರಿ ಅಂತ ಚಾಜ ಕೊಟ್ಟು ಹೊಕ್ಕಾರ ಅದರಾಗ ನೀವು ಬ್ಯಾರೆ ಯಾರನ್ನು ಹುಡುಕಾಕ ಹತ್ತಿರಿ’ ಎಂದು ನಾಟಕ ಆಡುವ ಕಾರ್ಯ ನಡೆಯಲು ಮಾರ್ಗ ತೋರುತ್ತಾನೆ.

ಇಲ್ಲಿ ಚಾಜ ಎನ್ನುವ ಶಬ್ದದ ಅರ್ಥವನ್ನು ಗಮನಿಸಿದಾಗ ನಾಟಕದ ಮುನ್ನಡೆಯಲ್ಲಿ ನೀತಿ–ನೆಯಮವೆಂದು ಹೇಳಲಾಗಿದೆ. ಇನ್ನೊಂದು ಅರ್ಥದಂತೆ ‘ಇಳೇವು’ ಕೊಡುವುದು ಅಥವಾ ಮಾಡುವುದು, ಗೊತ್ತುಪಡಿಸುವುದು ಎಂಬ ಅರ್ಥವೂ ಚಾಲ್ತಿಯಲ್ಲಿದೆ. ನಾಟಕವನ್ನು ಆಡಲು ಪಾತ್ರಗಳು, ವಾದ್ಯಗಳು ಪ್ರಮುಖವಾಗಿ ಬೇಕಾಗುತ್ತವೆ. ಅವರನ್ನು, ಆಟವನ್ನು ಆಡಲು ಗುರುತು ಮಾಡಿ ಇಳೇವು (ಎಲೆ, ಅಡಿಕೆ, ಹಣ ಕೊಡುವ ಪದ್ಧತಿ) ಕೊಟ್ಟು ದಿನವನ್ನು ಗುರುತಿಸಿ ನಾಟಕವನ್ನು ಆಡಲು ಸಿದ್ಧಪಡಿಸುವ ಕ್ರಮವಾಗಿದೆ.

ವಿಜಾಪುರ ಜಿಲ್ಲೆಯ ತುಂಬಾ ಹಾಗೂ ಉತ್ತರ ಕರ್ನಾಟಕದ ಹೆಚ್ಚಿನ ಹಳ್ಳಿಗಳಲ್ಲಿ ಈ ಚಾಜ ಪದ ಬಳಕೆಯಲ್ಲಿದೆ. ಜಮೀನ್ದಾರಿ ವ್ಯವಸ್ಥೆಯಲ್ಲಿ ಮದುವೆ ನಂತರ ಮನೆಗೆ ಬರಬೇಕಾದ ಸೊಸೆ ಊರ ಗೌಡ ಅಥವಾ ದೇಸಾಯಿ ಮನೆಯಲ್ಲಿ ಅವನ ತೆಕ್ಕೆಯಲ್ಲಿ ಮೊದಲ ರಾತ್ರಿ ಕಳೆಯಬೇಕಾಗಿತ್ತು. ಅದು ಒಂದು ಚಾಜ ಹಬ್ಬ ಹರಿದಿನದ ಎಲ್ಲಾ ಕ್ರಿಯೆಗಳು ಗೌಡ ದೇಸಾಯಿಗಳ ಮನೆಯಿಂದಲೇ, ಅವರ ನಾಯಕತ್ವದಲ್ಲಿ ಆರಂಭಗೊಳ್ಳುತ್ತವೆ. (ಅದೇ ಪುಟ–೭) ಇದೆಲ್ಲಾ‘ಚಾಜ’ ಎಂದೆಲ್ಲಾ ರೂಢಿಗತವಾದ ಪದವಾಗಿ ಸಮಾಜದಲ್ಲಿ ಬೆಸೆದುಕೊಂಡಿದೆ.

ನಂತರದಲ್ಲಿ ದೇಸಾಯಿ ಅವರ ವಾಡೆಯಲ್ಲಿ ನಡೆಯುವ ಊರಿನ ಸುದ್ದಿ, ಸಮಾಚಾರ, ಕುಲಕರ್ಣಿ ತಳವಾರ, ವಾಲೀಕಾರ ಮುಂತಾದವರಿಂದ ದೇಸಾಯಿಯನ್ನು ಗೌರವ ಪೂರ್ವಕ ದೇಖರೇಕಿ ಮಾಡುವುರು. ಈ ಸಂದರ್ಭದಲ್ಲಿ ಅಲ್ಲಿಗೆ ಕುರುಬರ ಬೀರಪ್ಪಜ್ಜನು ಬಂದು ತನ್ನ ಚಿಕ್ಕ ಸೊಸೆಯನ್ನು ಕರೆದುಕೊಂಡು ಬರುವ ವಿಚಾರ ಹೇಳುವನು. ಆಗ ದೇಸಾಯಿ ಮನೆಗೆಲಸ

ಮಾಡುವ ಕಲ್ಲಿಗೆ ಬೀರಪ್ಪಜ್ಜನ ಮನೆಗೆ ಚಾಜ ಕಳಿಸಲು ಅವಳಿಗೆ ಹೇಳುವನು. ಇದೊಂದು ಅನಿಷ್ಠ, ಅವಮಾನದ ಪದ್ಧತಿಯಾದರೂ ಸಹ ಜನರು ಅವರ ದರ್ಪ, ದಬ್ಬಾಳಿಕೆಗೆ ಒಪ್ಪಿಕೊಂಡು ಬಂದಿದ್ದರು. ರುದ್ರಮ್ಮ ದೇಸಾಯಿ ಅವರ ಮೊದಲ ಪತ್ನಿ ಇಂಥ ವಿಚಾರಗಳು ಗೊತ್ತಿದ್ದರೂ ಸೌಮ್ಯ ಸ್ವಭಾವದಿಂದ ಬೆಳೆದವಳಾಗಿದ್ದಳು. ಹೀಗಾಗಿ ಅಸಹಾಯಕಳಾಗಿದ್ದಳು. ಸಾವಂತ್ರಿಯು ಎರಡನೆಯ ಪತ್ನಿ. ಮೊದಲನೆಯ ಪತ್ನಿಗೆ ಮಕ್ಕಳಾಗಲಿಲ್ಲವೆಂದು ಇವಳನ್ನು ಮದುವೆಯಾಗಿದ್ದನು. ಇವಳು ಆಧುನಿಕ ಸಮಾಜದ ರೀತಿ–ರಿವಾಜು ತಿಳಿದವಳು. ಇವರಿಬ್ಬರ ಮಧ್ಯೆ ನಡುವೆ ನಡೆಯುವ ಕೌಟುಂಬಿಕ ಚರ್ಚೆ ಮತ್ತು ಸಂಭಾಷಣೆಯು ಸ್ತ್ರೀವಾದ ಕಡೆ ಮುಖ ಮಾಡುತ್ತದೆ. ಊರಿನ ಅಮಾಯಕ ಹೆಣ್ಣು ಮಕ್ಕಳ ಮೇಲೆ ನಡೆಯುವ ಚಾಜ ಹೆಸರಿನ ಅನ್ಯಾಯ, ಅತ್ಯಾಚಾರ ನೇಮಗಳ ಖಂಡಿಸುವ, ಸಮಾಜದ ಸಂಪ್ರದಾಯ ನೇಮಗಳಿಗೆ ಪ್ರತಿರೋಧಿಸುವ ಧೈರ್ಯ ಮತ್ತು ಮನಸ್ಥಿತಿಯನ್ನು ಸಾವಂತ್ರಿಯ ವ್ಯಕ್ತಿತ್ವದಲ್ಲಿ ಕಾಣುತ್ತೇವೆ. ಇಂತಹ ಅಮಾನವೀಯ ಪದ್ಧತಿಯು ಆಧುನಿಕ ಭಾರತವು ಸ್ವತಂತ್ರದ ನಂತರ, ಸಂವಿಧಾನದ ಅನೇಕ ಹಕ್ಕು ಬಾಧ್ಯತೆಗಳನ್ನು ತಿಳಿದು, ಬಡವರು ಮತ್ತು ಹಿಂದುಳಿದ ವರ್ಗದವರ ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಮುಂದೆ ಬರುವಂತೆ ಕಾಣುತ್ತಾರೆ. ಅದರಲ್ಲಿ ರಾಮ್ಯಾ ಎಂಬ ಹಿಂದುಳಿದ ವರ್ಗದ ಸಾಮಾನ್ಯ ಹುಡುಗ ಎಂ.ಎಲ್.ಎ ಆಗಿ ಸಮಾಜದ ಉದ್ಧಾರದ ಕನಸು ಕಾಣುತ್ತ ಅಧಿಕಾರ, ಹಣದ ಅಮಲಿನಲ್ಲಿ ತಾನು ಬಂದ ದಾರಿಯನ್ನೇ ಮರೆತು ಮತ್ತೊಬ್ಬ ದೇಸಾಯಿಯಾಗಲಿಕ್ಕೆ ಪ್ರಯತ್ನ ಪಡುತ್ತಾನೆ. ಈತನಿಂದ ಬದಲಾವಣೆ ಬಯಸಿದ ಸಮಾಜವು ಮುಂದೆ ರಮೇಶನ ಕಾರ್ಯವೈಖರಿಯು ನವ ಬ್ರಾಹ್ಮಣತ್ವಕ್ಕೆ ತಿರುಗುತ್ತದೆ. ಇದರಿಂದ ಬೇಸತ್ತು ಅಸಹಾಯಕತೆಯಿಂದ ಬಸಪ್ಪನೆಂಬ ಇದೇ ವರ್ಗದ ವ್ಯಕ್ತಿಯ ಪ್ರತಿರೋಧದಿಂದ ಮತ್ತೊಂದು ಗುಂಪು ನಿರ್ಮಾಣವಾಗುತ್ತದೆ. ಈ ತಂಡದಿಂದ ನಾಟಕದಲ್ಲಿ ಸಾಮಾಜಿಕ ಬದಲಾವಣೆಯನ್ನು ಕಾಣಬಹುದಾಗಿದೆ.

ವಿಜಯ ದಶಮಿಯ ಬನ್ನಿ ಮುಡಿಯುವ ಸಂದರ್ಭದಲ್ಲಿ ಪಲ್ಲಕ್ಕಿಯಲ್ಲಿ ದೇವರನ್ನು ಕೂಡ್ರಿಸಿಕೊಂಡು ಭಕ್ತಿ ಭಾವದಿಂದ ಬನ್ನಿ ಮುಡಿಯುವ ಜನರು ಸಂಭ್ರಮದಿಂದ ನಡೆಯುತ್ತಿರುತ್ತಾರೆ. ಆದರೆ ಇಲ್ಲಿ ಮೇಣ್ ನಡೆಸುವ ಪಲ್ಲಕ್ಕಿಯಲ್ಲಿ ಕೂರುವ ವಿಚಾರವಾಗಿ, ಪರಂಪರೆಯಿಂದ ದೇಸಾಯಿ ಇದನ್ನು ನಡೆಸುವುದು. ಇಂದು ಎಂ.ಎಲ್.ಎ. ರಮೇಶನು ಇದನ್ನು ವಿರೋಧಿಸಿ ನಿಲ್ಲಿಸುವ ಬದಲು ತಾನೇ ಈ ಪಲ್ಲಕ್ಕಿಯಲ್ಲಿ ಕೂರುವ ನವ ಚಿಂತನೆ ಮಾಡಿ ದೇಸಾಯಿ ಮತ್ತು ಈತನ ಗುಂಪುಗಳಾಗಿ ಮಾರ್ಪಾಡುತ್ತವೆ. ಈ ಗುಂಪುಗಳಿಗೆ ಇಬ್ಬರು ಸಾಕಷ್ಟು ಪ್ರಚೋದನೆ ನೀಡಿ, ಪ್ರತಿಷ್ಠೆಗೆ ನಿಂತು ಜನರ ಮಧ್ಯೆ ದ್ವೇಷದ ಭಾವನೆ ಮೂಡಿಸಿ ಊರಿನಲ್ಲಿ ಅರಾಜಕತೆ ಸೃಷ್ಟಿಸುತ್ತಾರೆ. ಈ ದುರಂತವನ್ನು ತಡೆಯಲು ದೇಸಾಯಿ ಅವರ ಎರಡನೇ ಪತ್ನಿ ಸಾವಂತ್ರಿಯೂ, ಬಸವ, ಜನರೊಂದಿಗೆ ಸೇರಿ ಆತನನ್ನು ಬೆಂಬಲಿಸಿ ದೇಸಾಯಿ ಮತ್ತು ಎಂಎಲ್.ಎ.ರವರ ವಿರುದ್ಧ ಹೋರಾಟ ನಡೆಸಿ ಊರಿನಲ್ಲಿ ಹತ್ತಿದ ಬೆಂಕಿಯನ್ನು ಶಾಂತಿಯಿಂದ ಶಮನ ಮಾಡಲು ಪ್ರಯತ್ನಿಸಿ ಯಶಸ್ವಿಯಾಗುವ ವಿಚಾರವೇ ಈ ನಾಟಕದಲ್ಲಿ ಮೂಡಿ ಬಂದಿದೆ.

ಜಮೀನ್ದಾರಿ ಅಥವಾ ಶ್ರೀಮಂತಿಕೆ ವ್ಯವಸ್ಥೆಯಿಂದ ಸಮಾಜದಲ್ಲಿ ದಬ್ಬಾಳಿಕೆ ತಾಂಡವವಾಡುತ್ತಿತ್ತು. ಇದರ ನೇತಾರರಾದ ದೇಸಾಯಿಯವರು ಇತರೆ ಮತ್ತು ಕೆಳವರ್ಗದ ಜನರನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದರು. ಅಷ್ಟೇ ಅಲ್ಲ ಪರಂಪರೆಯಲ್ಲಿ, ಸಮಾಜದ ಶ್ರೇಷ್ಠವೆನಿಸಿಕೊಂಡಿದ್ದ ವೈದಿಕರು ಅಥವಾ ಬ್ರಾಹ್ಮಣರು ಕೂಡ ಇವರ ಅಧೀನದಲ್ಲಿ ಒಂದೊಂದು ಅಧಿಕಾರ ಪಡೆದು ದೇಸಾಯಿ ಅವರಂತೆಯೇ ಮಡಿ ಮೈಲಿಗೆ ಅಸಮಾನತೆಯಿಂದ ಜನಸಮುದಾಯವನ್ನು ಕಾಣುತ್ತಿದ್ದರು. ನಾಟಕದ ಆರಂಭದಲ್ಲಿ "ಕುಲಕರ್ಣಿ ನಾಟಕೀಯವಾಗಿ ದೇಸಾಯಿಯರಿಗೆ 'ನಮಸ್ಕಾರ ನಮಸ್ಕಾರ ನಮಸ್ಕಾರ ನಮಸ್ಕಾರ ನಮಸ್ಕಾರ' ತಳವಾರ ವಿನಯದಿಂದ 'ಸಲಾಮರೀ ಧನ್ಯಾರ' ದುರಗಾ ಹವಾಲ್ಯಾ (ಭಕ್ತಿಯಿಂದ)'ಯಪ್ಪಾ ದೇವರೇ ಅಡ್ಡ ಬಿದ್ದವರಿ ತಂದೆ'(ಸಾವಕಾಶವಾಗಿ ಹಿಂದಕ್ಕೆ ಸರಿದು ಹೋಗುವುದು). ಅಂದರೆ ಸಮಾಜದ ಪ್ರತಿಯೊಬ್ಬ ಜನರು ಜಮೀನ್ದಾರರಿಗೆ ಈ ರೀತಿಯಲ್ಲಿ ವಿನಯ ಪೂರ್ವಕವಾಗಿ ಮತ್ತು ಗೌರವಯುತವಾಗಿ ನಡೆದುಕೊಳ್ಳಬೇಕಿತ್ತು. ಇಲ್ಲದಿದ್ದರೆ ಅವರ ಗತಿ ಅಷ್ಟೇ, ಕುಲಕರ್ಣಿಗೆ ಅದೆಷ್ಟೋ ಸಲ ಬಯ್ಯುವುದು ಅವಮಾನಿಸುವುದು ಸಹಜವಾಗಿತ್ತು. ಆದರೆ ಇವರಿಗೆ ಒಂದು ದೊಡ್ಡ ಸ್ಥಾನವಾದ ವಾಡೆದ ಕುಲಕರ್ಣಿ ಕೈತಪ್ಪುತ್ತದೆ ಎಂಬ ಕಾರಣದಿಂದ ಸ್ವಾಭಿಮಾನ ಮಾರಿಕೊಂಡು ಶ್ರೀಮಂತಿಕೆಯ ಸೊಬಗನ್ನು ಅನುಭವಿಸುತ್ತಿದ್ದ. ಇತರೆಯವರಿಗೆ ಬೌದ್ಧಿಕ ದರ್ಪ ಮಾಡುತ್ತಾ ಕಾಲ ಕಳೆಯುತ್ತಿದ್ದರು.

ದೇಸಾಯಿ ಅವರಿಗೆ ಜಂಬ, ದರ್ಪದ ದಬ್ಬಾಳಿಕೆಯ ಜೀವನವೇ ಮುಖ್ಯವಾಗಿತ್ತು. ಮೊದಲ ಪತ್ನಿ ರುದ್ರಮ್ಮನನ್ನು ಮದುವೆಯಾಗಿ ವರ್ಷಗಳು ಕಳೆದರೂ ವಾಡೆದ ಮುಂದಿನ ವಾರಸುದಾರ ಶುಭ ಸಮಾಚಾರವಿಲ್ಲದೆ ಬರಡಾಗಿತ್ತು. ಈ ಕಾರಣದಿಂದ ಎರಡನಯ ಮದುವೆಯಾಗಿ ಅವಳಿಂದ ಪುತ್ರ ಸಂತಾನವನ್ನು ಪಡೆದು ಮುಂದಿನ ದೇಸಾಯಿಯ ಕನಸು ಕಾಣುತ್ತಿದ್ದ. ಇದಕ್ಕೋಸ್ಕರವಾಗಿ ರುದ್ರಮ್ಮಳು, ತಂಗಿಯಾದ ಸಾವಂತ್ರಿಗೆ ಅತ್ಯಂತ ಪ್ರೀತಿಪೂರ್ವಕ ಕಾಳಜಿವಹಿಸುತ್ತಿದ್ದಳು. ಕಾಲ ಕಳೆಯುತ್ತಿತ್ತು ಆದರೆ ಈ ವಾತಾವರಣವೇ ನಿರ್ಮಾಣವಾಗಲಿಲ್ಲ.

ಇಬ್ಬರ ಹೆಂಡರನ್ನು ಮದುವೆಯಾದ ಪ್ರತಿಷ್ಠೆಯಲ್ಲಿ ದೇಸಾಯಿ ಊರಿನವರ ಮುಂದೆಯೇ ಮೀಸೆಯ ಮೇಲೆ ಕೈ ಹಾಕಿಕೊಂಡು ಗಂಭೀರತೆಯನ್ನು ಮೆರೆಯುವುದು ಶ್ರೀಮಂತಿಕೆಯ ಸೋಗಿನ ಸೊಬಗಿನ ಸಂಪತ್ತಿಗೆಯಲ್ಲಿ ಇಬ್ಬರು ಪತ್ನಿಯರು ಇದ್ದರು. ಮನಸ್ಸಿನ ದೈಹಿಕ ಬಯಕೆಯ ಕೊರತೆಯಿಂದ ಬಳಲುತ್ತಾ ಜೀವನದಲ್ಲಿ ಬರುಡಾಗಿ ಕಾಲ ಕಳೆಯುವುದು ಇವರ ಪಾಲಿಗೆ ವಿಧಿಯಲ್ಲ ಹೇಳಲಾರದ, ತಾಳಲಾರದ ದುಃಖವನ್ನು ತೋಡಿಕೊಳ್ಳುತ್ತಾರೆ.'ನಿನ್ನಂಗ ನನಗೂ ಮಕ್ಕಳು ಆಗುವುದಿಲ್ಲ (ದುಃಖದಿಂದ) ದೇಸಾಯಿ ದೇಸಾಯಿ... ಹಂತೇಕ'(ಪುಟ–೨೧) ಎಂದು ಅವನ ಪುರುಶಾರ್ಥದ ಶಕ್ತಿ ಸಾಮರ್ಥ್ಯದ ಬಗ್ಗೆ ಸೂಚ್ಯಾರ್ಥದಲ್ಲಿ ನುಡಿಯುತ್ತಾಳೆ ಸಾವಂತ್ರಿ.

ನಾಟಕವನ್ನು ಪರಿಪೂರ್ಣವಾಗಿ ಗಮನಿಸಿದಾಗ ಕೇವಲ ಅನ್ಯಾಯ, ದಬ್ಬಾಳಿಕೆಯು ಕಂಡುಬಂದರೂ ಸಹ ವೈಚಾರಿಕ, ಬಂಡಾಯದಂತಹ ಪ್ರತಿರೋಧದ ನೆಲೆಗಳು ಮೂಡಿಬರುವುದು ನಾಟಕದ ವೈಶಿಷ್ಟವಾಗಿದೆ. ಸಾವಂತ್ರಿಯ, ರಮೇಶ ಎಂ.ಎಲ್.ಎ. ಮತ್ತು ಬಸಣ್ಣ ಇಂತಹ ಪ್ರಗತಿಪರ ಚಿಂತಕರಿಂದ ಅನಿಷ್ಟ ಸಂಪ್ರದಾಯ ಅನ್ಯಾಯದ ವಿರುದ್ಧ ಧ್ವನಿಸುತ್ತವೆ. ರುದ್ರಮ್ಮನ ಜೊತೆ ಮಾತನಾಡುವಾಗ ಸಾವಿತ್ರಿ ಅನೇಕ ಮಾತಿನಲ್ಲಿ ದೇಸಾಯಿ ಅವರನ್ನು ದೇಸಾಯಿಯ ಅನ್ಯಾಯದ ಕಾರ್ಯವನ್ನು ವಿರೋಧಿಸುತ್ತಾಳೆ. 'ಊರ ಗುತಿಗಿ ಹಿಡಿಯುವ ಕಾಲ ಅಲ್ಲ ಇದು, ಎಲ್ಲರಂಗ ನಾವು ಊರಾಗಿರ್ಬೇಕು ಅದು ಬಿಟ್ಟು ಊರ್ ನಂದು ನಾ ಊರ ಆಳಾಕ ಹುಟ್ಟಿನೆ ಅಂದ್ರೆ ಆಗೋದಿಲ್ಲ ಈಗ' (ಪುಟ–೧೬) ಎನ್ನುವ ಮಾತು ದೇಸಾಯಿಯ ನಡತೆಯನ್ನು ನೇರವಾಗಿ ವಿರೋಧಿಸುವುದನ್ನು ಕಾಣುತ್ತೇವೆ.

ಇವಳ ಬಂಡಾಯದ ಮನೋಧೋರಣೆಗೆ ಶರಣರ ಪ್ರಭಾವವನ್ನು ಕಾಣಬಹುದಾಗಿದೆ. ಊರಿನ ಹುಚ್ಚಪ್ಪ ಮಠದಾಗ ಪುರಾಣ ಹೇಳುವ ಸಂದರ್ಭದಲ್ಲಿ ಗಂಡನು ಸರಿದಾರಿಯಲ್ಲಿ ನಡೆಯದೇ ಇದ್ದಾಗ ಅವನನ್ನು ದಾರಿಗೆ ತರುವ ಮಾರ್ಗವನ್ನು ಆಯ್ದಕ್ಕಿ ಲಕ್ಕಮ್ಮನ ವಚನದ ಉದಾಹರಣೆ ನೀಡಿದ್ದನ್ನು ಪ್ರೇರಣೆಯಾಗಿ ಪಡೆಯುತ್ತಾಳೆ.'ಆಸೆ ಎಂಬುದು ಅರಸಂಗಲ್ಲದೆ'(ಪುಟ–೧೮) ಎನ್ನುವ ಶರಣರ ಸಂದೇಶಕ್ಕೆ ಮಾರುಹೋಗಿದ್ದಾಳೆ. ಇದಲ್ಲದೆ ಆಧುನಿಕ ಸಮಾಜದ ಪರಿಜ್ಞಾನವಿರುವ ಅವಳು ಅಕ್ಷರವನ್ನು ಕಲಿತಿದ್ದಾಳೆ. ಅಂಧಕಾರ ಅನೀತಿಯಿಂದ ತುಂಬಿದ ಮನಸ್ಸು ಮತ್ತು ಸಮಾಜವನ್ನು ವಿರೋಧಿಸಿ ಅಕ್ಕ ರುದ್ರಮ್ಮಳಂತೆ ಸೌಮ್ಯ ಸ್ವಭಾವದಿಂದ ಪರಂಪರೆಗೆ ತನ್ನನ್ನು ಅರ್ಪಿಸಿಕೊಂಡಿರಲು ಬಯಸುವುದಿಲ್ಲ.ಸ್ತ್ರೀಯು ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಮುಂತಾದ ಕ್ಷೇತ್ರದಲ್ಲಿ ನಡೆಯುವ ದಬ್ಬಾಳಿಕೆಗೆ, ವೈಚಾರಿಕವಾಗಿ ಚಿಂತಿಸಿ ಅದರೊಂದಿಗೆ ನಡೆಯಬೇಕು ಇದರಿಂದ ಮಹಿಳಾ ಸಬಲೀಕರಣ ಮತ್ತು ಸಮಾಜದಲ್ಲಿ ಬಡವರ ಮೇಲೆ ನಡೆಯುವ ಅನ್ಯಾಯ ಆಕ್ರಮಣಗಳು ನಿಲ್ಲುತ್ತವೆ ಎಂಬುವುದು ಪ್ರಬಲವಾದ ನಿಲುವು ಸಾವಂತ್ರಿಯಳದ್ದಾಗಿದೆ.

ಹೇಳದಹಾಗೆ ಅಣ್ಣನೊಂದಿಗೆ ತವರುಮನೆಗೆ ಹೋಗಿ ಬಂದಾಗ ದೇಸಾಯಿ ಮತ್ತು ಸಾವಂತ್ರಿಯ ಚರ್ಚೆ ಸ್ವಾಭಿಮಾನತೆಯ ಅಂಶದಿಂದ ಕೂಡಿದೆ. ಸಿಟ್ಟಾಗಿದ್ದ ದೇಸಾಯಿ ಸಾವಿತ್ರಿಯ ನೋಡಿ ಮತ್ತಷ್ಟು ಆವೇಶಕ್ಕೆ ಒಳಗಾಗಿ 'ಯಾರನ್ನು ಕೇಳಿ ಬಂದಿ ಮನಿ ಒಳಗ,ಇದ ಏನ ಧರ್ಮ ಛತ್ರ ಅಂತಾ ತಿಳಿದಿಯೇನು ನಿನಗೆ ಬೇಕಾದಾಗ ಹೋಗೋದು ಬೇಡದಾಗ ಬರೋದು'(ಪುಟ–೨೨)ಸಾವಂತ್ರಿ(ಅಲಕ್ಷದಿಂದ)'ಹಬ್ಬ ಹುಣ್ಣಿಮೆಗೆ ತವರ ಮನೆಗೆ ಹೋಗೋನಂತ ನೀವು ಕಕೊರ್ಂಡು ಹೋಗುವಂಗಿದ್ರೆ ನಾನ್ಯಾಕೆ ಹೇಳದೆ ಕೇಳದೆ ಹೊಕ್ಕಿದ್ದೆ' (ಪುಟ–೨೨) ಎನ್ನುವ ಅವಳ ಧೈರ್ಯ ತೋರುವ ಸ್ವಾಭಿಮಾನವು ಅಸಹಾಯಕ ಬಲಹೀನರಿಗೆ ಶಕ್ತಿ ತುಂಬುವಂತದ್ದಾಗಿದೆ.

ಸಿಟ್ಟಿನ ಸಂಭಾಷಣೆಯಲ್ಲಿ ದೇಸಾಯಿ 'ನಿನ್ನ ಕುತ್ತಿಗೆ ಹಿಚುಕಿ ಹುಗದೆನ ಇಲ್ಲೇ, ಏನಂತ ತಿಳಿದೆ ನನ್ನ ನಿನ್ನಂತ ಹಲ್ಕಟ್ಟ ಹೆಂಗಸರನ್ನ ಹಗೆದಾಗ ಹಾಕಿ ಮುಚೇನ'(ಪುಟ–೨೩) ಇದಕ್ಕೆ ಪ್ರತ್ಯುತ್ತರವಾಗಿ 'ನನ್ನ ತಲೆಯಾಗಿನ ಕೂದಲ, ಕೂದಲ ಕೊಂಕಿದ್ರ ನಿನ್ನ ವಾಡೆದ ಚಿಪಗಲ್ಲ್‌ಉಳಿಯಾಕಿಲ್ಲ ತಿಳುಕೊ' ಎಂದು ಎಚ್ಚರಿಕೆ ಕೊಡುವ ಅವಳ ದಿಟ್ಟತನವೇ ಸ್ತ್ರೀವಾದ, ವೈಚಾರಿಕತೆಗೆ ಕಾರಣವಾಗುತ್ತದೆ. ದಬ್ಬಾಳಿಕೆ, ಅನ್ಯಾಯದ ವಿರುದ್ಧ ಬಂಡಾಯದೊಂದಿಗೆ ವೈಯಕ್ತಿಕ ಅಸ್ತಿತ್ವಕ್ಕೆ ಅರಿವು, ಸ್ವಾಭಿಮಾನದ ಪ್ರತೀಕವಾಗಿ ನಿಲ್ಲುವಂತದ್ದಾಗಿದೆ.

ವಾಡೆಯಲ್ಲಿ ನಡೆಯುವ ಪ್ರತಿಯೊಂದು ಸಂದರ್ಭವನ್ನು ಅತ್ಯಂತ ಮುತುವರ್ಜಿ ವಹಿಸಿ ಗ್ರಹಿಸುವುದು ಚಿಕಿತ್ಸಕ ಬುದ್ಧಿಯಿಂದ ಪರಿಹಾರ ಕಂಡುಕೊಳ್ಳಲು ಅವಳು ಪ್ರಯತ್ನಿಸುತ್ತಿದ್ದಾಳೆ.ಚಾಜ ಹೆಸರಿನಲ್ಲಿ ಗಂಡ ಮಾಡುವ ತಪ್ಪನ್ನು ಸಹಿಸದೆ ಬಡವರ ಹೆಣ್ಣು ಮಕ್ಕಳ ಮಾನಹಾನಿ, ಅತ್ಯಾಚಾರವನ್ನು ನಿರ್ಬಿಡೆಯಿಂದಲೇ ತಡೆಯೊಡ್ಡುವಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ.'ಗಂಡಾ ಮಾಡೋ ಹಾದ್ರ ನೋಡುದ ಅಂದ್ರೆ ನಾವು ಕುಂತಗೊಂಡು ಒಂದ ಹೆಣ್ಣಿನ ಜೀವಕೊಂದಂಗ... ನೀ ಏನು ಹೇಳ ಎಕ್ಕ ಇವತ್ ಇದಕ್ಕೊಂದು ಗತಿ ಕಾಣಸಾಕಬೇಕು' (ಪುಟ–೨೯) ಎಂಬ ನಿರ್ಧಾರದಲ್ಲಿ ತನಗಾದ ಅನ್ಯಾಯಕ್ಕಾಗಿ ಹೋರಾಡುವ ವ್ಯಕ್ತಿಗಳಂತೆ ಇಲ್ಲಿ ಪರಿರಿಗಾದ ಅನ್ಯಾಯದ ಬಗ್ಗೆ ತನ್ನ ಸಾಮಾಜಿಕ ಕಳಕಳಿ ತೋರುತ್ತಾಳೆ. ಇಂತ ನಿಲುವಿನ ವ್ಯಕ್ತಿತ್ವವು ಇತರೆ ಎಲ್ಲಾ ಸ್ತ್ರೀಯರಲ್ಲಿ ಬಂದಿದ್ದೆ ಆದರೆ ಅನ್ಯಾಯ ಅಕ್ರಮ, ಅತ್ಯಾಚಾರ, ವರದಕ್ಷಿಣೆ ಸಾವಿನಂತಹ ಪ್ರಕರಣಗಳು ಹೆಚ್ಚುತ್ತಿರಲಿಲ್ಲ. ಅರಿವು ಹೆಚ್ಚಿದಂತೆ ಅಪರಾಧಗಳು ಕಡಿಮೆಯಾಗುತ್ತಿದ್ದವು.

ಬಡವರ ಹೆಣ್ಣು ಮಕ್ಕಳ ಮೇಲೆ ನಡೆಯುವ ಯಜಮಾನ್ಯ ಸಂಸ್ಕೃತಿಯ, ಶ್ರೀಮಂತಿಕೆಯ,, ಸೊಕ್ಕಿನ ಅಧಿಕಾರದ ಚಲಾವಣೆಯು ಅನೇಕ ಕಾರಣಗಳಿಂದ ಸಮಾಜದಲ್ಲಿ ಭಯವಿಲ್ಲದೆ ನಡೆದ ಸಂಗತಿಯಾಗಿದೆ. ಮಾನಹಾನಿಗೆ ಒಳಗಾದವರು ತಮ್ಮನ್ನು, ತಮ್ಮ ಬದುಕನ್ನು ಗೌರವದಿಂದ ಕಾಪಾಡಿಕೊಂಡು ಪ್ರಾಣಕ್ಕಿಂತ ಮಾನವೇ ಶ್ರೇಷ್ಠ ಎನ್ನುವ ಮೌಲ್ಯದೊಂದಿಗೆ ಬಾಳುತ್ತಿದ್ದಾರೆ. ಇಂಥ ಏನು ಅರಿಯದ ಮುಗ್ದ ಜೀವಗಳ ಮೇಲೆ ದುಡಿಯುವ ಸಂದರ್ಭದಲ್ಲಿಯೇ ಅನ್ಯಾಯ, ಅತ್ಯಾಚಾರಗಳು ನಡೆಯುತ್ತಿವೆ. ನಿಮಯಬಾಹಿರವಾಗಿ ಇಂಥ ಜಾಜದಂತ ನಿಯಮಗಳು ಮುಂದುವರಿದಾಗತಮ್ಮ ಶೀಲ, ಚಾರಿತ್ರೆಯಿಂದ ದೈಹಿಕ ಹಲ್ಲೆಯಿಂದ ಮಾನಕಂಜಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡ ಅನೇಕ ಉದಾಹರಣೆಗಳಿದ್ದಾವೆ. ತಮ್ಮತಮ್ಮ ಕುಟುಂಬದಲ್ಲಿ ಅಥವಾ ಸಮುದಾಯದಲ್ಲಿ ಇಂತಹ ಘಟನೆ ನಡೆದರೆ ಮಾತ್ರ ಅವುಗಳನ್ನು ವಿರೋಧಿಸುವ ರಾಷ್ಟ್ರಮಟ್ಟದಲ್ಲಿ ಅವುಗಳನ್ನು ಹೋರಾಟ ನಡೆಸಿ ನ್ಯಾಯ ಕೊಡಿಸುವ ವ್ಯವಸ್ಥೆಗಳನ್ನು ನಿರ್ಮಿಸುತ್ತುದ್ದಾರೆ. ಆದರೆ, ಅನ್ಯಾಯಕ್ಕೊಳಗಾದ ಆ ಹೆಣ್ಣು ಮಕ್ಕಳಿಗೆ ಎಲ್ಲಾ ಸಮುದಾಯದ ಸ್ತ್ರೀಯರು ಬೀದಿಗಿಳಿದು ಬಡ, ಅಜ್ಞಾನವಂತ ಹೆಣ್ಣು ಮಕ್ಕಳಿಗೆ ನ್ಯಾಯವನ್ನು ಒದಗಿಸಿ ಕೊಡುವ ಪ್ರಯತ್ನವು ನಡೆದಿದ್ದು

VOLUME - 13 | ISSUE - 7 | APRIL - 2024

ಪರಂಪರೆಯಲ್ಲಿ ಬೆರಳೆಣಿಕೆ ಎಷ್ಟು ಮಾತ್ರ. ಬಡವರಿರಲಿ ಶ್ರೀಮಂತರಿರಲಿ ಅತ್ಯಾಚಾರಕ್ಕೊಳಗಾದ ಅನ್ಯಾಯಕ್ಕೊಳಗಾದ ಪ್ರತಿ ಹೆಣ್ಣು ಮಕ್ಕಳು ದೇಹವು ಅಷ್ಟೇ, ಅವರೆಲ್ಲರ ಮಾನ ಗೌರವವು ಅಷ್ಟೇ ಶ್ರೇಷ್ಠ, ಎಂದು ಹೋರಾಡುವ ಮನಸ್ಥಿತಿಯು ಯಾವಾಗ ಬರುತ್ತದೆಯೋ ಅಲ್ಲಿಯವರೆಗೆ ಸ್ತ್ರೀ ಮೇಲಾಗುವಂತಹ ಅನ್ಯಾಯ ನಡೆದೇ ಇರುತ್ತವೆ.

ಆದರೆ ಇಲ್ಲಿ ಗಂಡನ ಈ ಅನೀತಿ ಕಾರ್ಯವನ್ನು ಸ್ವತಃ ತಾನೇ ಎದುರಿಸಿ ನಿಂತು ಅವನ ವಿರುದ್ಧ ಬಂಡೇಳುವುದರ ಮಟ್ಟಕ್ಕೆ ಸಾವಂತ್ರಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಅವಳಿಗೆ ಇಲ್ಲಿ ಸಂಬಂಧ ಏನು ಮುಖ್ಯವಾಗುವುದಿಲ್ಲ. ಅಮಾಯಕ ಹೆಣ್ಣು ಮಕ್ಕಳ ಮಾನ ಉಳಿಸುವ ಪ್ರಯತ್ನವೇ ಅವಳ ಮುಖ್ಯಗುರಿ. ಇದರ ಮುಂದೆ ಯಾವುದೇ ಭಾವನಾತ್ಮಕ ಸಂಬಂಧವೂ ಎದುರು ಬರದು ಇಂಥ ಬಂಡಾಯದ ಸ್ತ್ರೀವಾದ ಮನಸ್ಥಿತಿಯು ನಿರ್ಮಾಣವಾಗುವ ಜರೂರು ಇದೆ ಎನ್ನುವುದನ್ನು ತೋರುತ್ತಾಳೆ. ಹೀಗಾಗಿ ಅವಳು "ಹೆಣ್ಣು ಆದಾಕಿ ಹೆಣ್ಣಿನ ಬಗ್ಗೆ ಚಿಂತೆ ಮಾಡದ ಗಂಡಸ ಮಾಡಾಕ ಅದಿತೇನು ನಿನ್ನ ಪ್ಲಾನು ಕಲಾವಿದರಿಗೂ ಬರುದಿಲ್ಲ ಬಿಡು' (ಪುಟ–೩೨) ಎನ್ನುತ್ತಾಳೆ ಸಾವಂತ್ರಿ. ಆದರೆ ಈ ರೀತಿ ಅರ್ಥ ಮಾಡಿಕೊಳ್ಳುವುದಕ್ಕೂ ಅಂಥದ್ದೇ ಹೃದಯವಂತ ಮನಸ್ಸು ಬೇಕು.ಅವಳೇ ಕಲ್ಲಿ. ಇವಳು ವಾಡೆದ ಕೆಲಸಕಾರ್ಯ ಮಾಡುವ ಆಳು. ದುರ್ಗಪ್ಪನ ಹೆಂಡ್ತಿ ಇವಳು ಎಂಥಾ ಮಹಾನ್ ಕಾರ್ಯವನ್ನು ಮಾಡುವಳೆಂದರೆ ಚಾಜದ ಸಂದರ್ಭದಲ್ಲಿ ದೇಸಾಯಿಗೆ ದುರ್ಗಪ್ಪ ಗಾಂಜಾ ಸೇದು ಚಿಲುಮೆಯಲ್ಲಿ ತಂಬಾಕು ಸೇರಿಸು ಬದಲು ದುರಗನ್ನ ಕರೆದ ಅದರಾಗ ದೇಸಾಯಿಗೆ ಗೊತ್ತಾಗದಂಗ ಗಾಂಜಾತಿಕ್ಕಿ ಹಾಕಿರುತ್ತಿದ್ದಳು. ಚೆಲುಮೆ ಸೇದಿ ಸೇದಿದಾಂಗ ಮೈಮ್ಯಾಲೆ ಎಚ್ಚರ ಖಬರ ಇಲ್ಲದಂಗ ಮಲಗತ್ತಿದ್ದ... ದುಗರಾ ಮತ್ತು ಕಲ್ಲಿ ಕೂಡಿ ಹೆಣ್ಣು ಮಕ್ಕಳ ಮಾನ ಉಳಿಸ್ಯಾರ' (ಪುಟ–೩೨) ಎಂದು ವಾಡೆಯಲ್ಲಿ ಕಾರ್ಯನಿರ್ವಹಿಸುವ ಇವರಿಬ್ಬರ ಕಾರ್ಯವನ್ನು ಶ್ಲಾಘಿಸುತ್ತಾಳೆ.

ಮೇಲ್ವರ್ಗದವರಿಂದ ಶೋಷಣೆ ಅನುಭವಿಸಿ ಸಮಾಜದ ಮೇಲಸ್ಥರಕ್ಕೆ ಬಂದಿರುವ ಎಂ.ಎಲ್.ಎ. ರಮೇಶನು ಆರಂಭದಲ್ಲಿ ಶೋಷಿತರ ಆಶಾಕಿರಣವಾಗಿ ಸುಧಾರಕನಂತೆ ತನ್ನ ರಾಜಕೀಯ ಜೀವನವನ್ನು ಆರಂಭಿಸುತ್ತಾನೆ. ತನ್ನ ಕ್ಷೇತ್ರದಲ್ಲಿ ಅನೇಕ ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಶಿಕ್ಷಣ, ಸ್ವಾಭಿಮಾನ, ಸಮಾನತೆ, ಸಹೋದರತೆ ಅಂತ ಪ್ರಮುಖ ಅಂಶಗಳ ಕುರಿತು ಕ್ರಾಂತಿಕಾರಿ ಹೋರಾಟ ಮತ್ತು ಜಾಗೃತಿಯನ್ನು ಮೂಡಿಸುತ್ತಾನೆ. ಈ ಹುದ್ದೆಯಿಂದ ತಾನು ಪಡೆಯುವ ಗೌರವ ಮತ್ತು ಅಧಿಕಾರದ ಲಾಲಸೆಯು ಮತ್ತು ಪ್ರತಿಷ್ಠೆಯ ಅಹಂ ಭಾವದಲ್ಲಿ ಮೆರೆಯಲು ತನಗೆ ಗೊತ್ತಿಲ್ಲದ ಹಾಗೆಯೇ ಕೆಲವೇ ದಿನಗಳಲ್ಲಿ ಬದಲಾಗಿ ಬಿಡುತ್ತಾನೆ.

ಸಭೆ ಸಮಾರಂಭಗಳಲ್ಲಿ ಆತ್ಮವಿಶ್ವಾಸದಿಂದ ಸಮಾಜಕ್ಕೆ ಕರೆ ನೀಡುವುದನ್ನು ಕಾಣುತ್ತೇವೆ.'ಅಕ್ಷರ ವಿದ್ಯೆನೇ ನಮ್ಮ ಆಸ್ತಿ ಆಗಬೇಕು'(ಪುಟ–೪೩) ಗಾಂಧೀಜಿಯವರ ಕನಸು ಭಾರತದಲ್ಲಿ ಬೇರೂರಬೇಕು. ಅವರ ಸಂದೇಶವನ್ನು ಪಾಲಿಸುವುದರ ಮೂಲಕ ನಮ್ಮ ಬದುಕನ್ನು ಸಾಕಾರಗೊಳಿಸಿಕೊಳ್ಳಬೇಕು. ಶತಶತಮಾನಗಳಿಂದ ದೇವರು ಧರ್ಮದ ಹೆಸರಿನಿಂದ ಸಮಾಜವು ನಮ್ಮನ್ನೆಲ್ಲರನ್ನು ಶೋಷಣೆ ಮಾಡುತ್ತಾ ಮೌಢ್ಯ ಮತ್ತು ಬಡತನದ ಅಂಚೆಗೆ ದೂಡಿದೆ. ಜಾತಿ ಎನ್ನುವುದು ನಾವೇ ಮಾಡಿಕೊಂಡದ್ದು. ಮೇಲು–ಕೀಳು ದೇವರ ಮಾಡಿದ್ದು ಅಲ್ಲವೆಂದು ಮುಂತಾದ ಆದರ್ಶದ ಮಾತುಗಳು ಮುಖಾಂತರ ಸಮಾಜದ ಪ್ರೀತಿಗೆ ಪಾತ್ರನಾಗುತ್ತಾನೆ.

ಗ್ರಾಮದಲ್ಲಿ ನಡೆಯುವ ಬನ್ನಿ ಮುಡಿಯುವ ಹಬ್ಬದಲ್ಲಿ ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಮೇಣ್(ಪಲ್ಲಕ್ಕಿ ಹೊರಲು ಹಿಂದೆ ಮುಂದೆ ಹೆಗಲು ಕೊಡುವ ಕಟ್ಟಿಗೆ ಸಾಧನ) ಹೋಗುವುದು. ಇದರಲ್ಲಿ ಅನೇಕ ಹಳ್ಳಿಗಳಲ್ಲಿ ದೇವರ ಮೂರ್ತಿಯನ್ನು ಶೃಂಗರಿಸಿ ಇದರಲ್ಲಿ ಕೂಡ್ರಿಸಿಕೊಂಡು ಮೆರವಣಿಗೆ ಮೂಲಕ ಭಕ್ತಿ ಭಾವದಿಂದ ಊರಿನ ಬೀದಿಯಲ್ಲಿ ಹೊತ್ತುಕೊಂಡು ಹೋಗಿ ಬನ್ನಿ ಗಿಡದಲ್ಲಿ ಬನ್ನಿಯನ್ನು ಕಿತ್ತು ಪೂಜಿಸಿ ನಮನ ಸಲ್ಲಿಸುವ ಪದ್ಧತಿ ಇದೆ.'ಚಾಜ' ನಾಟಕದಲ್ಲಿ ಪಲ್ಲಕ್ಕಿಯಲ್ಲಿ ಊರಿನ ದೇಸಾಯಿ ಕೂಡುವುದನ್ನು ಕಾಣುತ್ತೇವೆ. ಈ ವಿಚಾರವು ಚರ್ಚೆಗೆ ಬಂದಾಗ ವ್ಯಕ್ತಿ ಪೂಜೆ ಸಲ್ಲದೆಂದು ವಿರೋಧಿಸಿ ವಿಷಯ ಮೇಲ್ಪಂಕ್ತಿಗೆ ಬಂದಾಗ ರಮೇಶನುಸಿಟ್ಟಿಗೆದ್ದು ಯಾಕೆ ಹೋರಡುವುದಿಲ್ಲ. 'ಅದರಾಗ ನಾನು ಕುಂತ್ರೆ ತಲಾಂತರದಿಂದ ಮೇಣ್ ಹೊತ್ತ ನಮಗ ಕುಂದ್ರು ಹಕ್ಕಿಲ್ಲೇನು'(ಪುಟ–೨೩) ಎನ್ನುವ ಸಂದೇಶವನ್ನು ನೀಡುತ್ತಾನೆ. ಈ ಬಯಕೆಯ ಪ್ರತಿಷ್ಠೆಯು ದೇಸಾಯಿ ಅವರಿಗೆ ಕ್ಷಮಿಸದ ಕೋಪ ತರಿಸುತ್ತದೆ. ಪರಂಪರೆಯಲ್ಲಿ ದೇಸಾಯಿ ಇಲ್ಲವೇ ಅವರ ಮನೆಯವರು ವಂಶಸ್ಥರ ಕೂಡ್ರುವುದು ಪರಂಪರೆಯಾಗಿದೆ. ಆದರೆ ಕೆಳವರ್ಗದ ವ್ಯಕ್ತಿಗಳಿಂದ ಇದನ್ನು ಪ್ರಶ್ನಿಸಿದಾಗ ಊರೊಳಗೆ ತನ್ನ ಬೆಂಬಲಿಗರಿಗೆ ಹಿಂಸಾತ್ಮಕವಾಗಿ ನಡೆದುಕೊಳ್ಳಲು ಪ್ರಚೋದನೆ ನೀಡುತ್ತಾನೆ. ಇದಕ್ಕೆ ಸಂಬಂಧಿಸಿದಂತೆ 'ಬಿಡಿಸಿಕೊಂಡು ಬರುತ್ತೇನೆ ಜೈಲಿಗೆ ಹೋದರು ನಿಮ್ಮ ಮಕ್ಕಳ ಮನೆಯನ್ನೆಲ್ಲ ನೋಡಿಕೊಳ್ಳುತ್ತೇನೆ. ಇದು ಈ ವಾಡೆದ ಮರ್ಯಾದೆ ಪ್ರಶ್ನೆ ಐತಿ ನೀವು ನಡ್ರಿ ಇನ್ನ'(ಪುಟ–೨೯) ಎಂದು ಎಲ್ಲರಲ್ಲಿ ಪ್ರಚೋದನೆ ತುಂಬಿ ಬೆಂಬಲಿಸುತ್ತಾನೆ. ರಮೇಶ ಮತ್ತು ದೇಸಾಯಿ ಅಧಿಕಾರ ಪ್ರತಿಷ್ಠೆಯಿಂದ ಎರಡು ಗುಂಪುಗಳು ತಯಾರಾಗುತ್ತವೆ. ಸಂಘರ್ಷದ ಮಟ್ಟಕ್ಕೆ ಹೋಗಿ ತಲುಪುತ್ತವೆ ಮಾರಕಾಸ್ತ್ರಗಳನ್ನು ಕೈಯಲ್ಲಿ ಹಿಡಿದು ತಮ್ಮತಮ್ಮ ನಾಯಕರ ಪರವಾಗಿ ನಿಲ್ಲುತ್ತಾರೆ.

ಇದನ್ನೆಲ್ಲ ಗಮನಿಸಿದ ಮೂರನಯ ಬಂಡಾಯಗಾರ ಬಸವಣ್ಣನು, ರಮೇಶನಿಗೆ ತನ್ನ ಶಕ್ತಿ ಮೀರಿ ಸಲಹೆ ಬುದ್ಧಿವಾದವನ್ನು ಹೇಳುತ್ತಾನೆ. ಆದರೆ ಇದಕ್ಕೆ ಸರಿ ಹೋಗದೆ ಇದ್ದಿದ್ದರಿಂದ 'ದೇಸಾಯಿಕ್ಕಿಂತ ಮೊದಲೇ ನಿನ್ನ ವಿರುದ್ಧ ಧ್ವನಿ ಎತ್ತಬೇಕಾಗುತ್ತದೆ' (ಪುಟ–೨೪) ಎಂದು ಎಂ.ಎಲ್.ಎ.ಗೆ ಎಚ್ಚರಿಕೆ ನೀಡುತ್ತಾನೆ. 'ಇಲ್ಲ ಈ ವರ್ಷ ಮೇಣ್ ಹೊಂಡುತ್ತ ಅದರಾಗ ನಾನ ಕುಂದರತೇನಿ, ತಲೆತಲಾಂತರದಿಂದ ನಮ್ಮ ಜನಕ್ಕಾದ ಅಪಮಾನದ ಸೇಡು ತೀರಿಸಿಕೊಂತಿನಿ' (ಪುಟ–೨೪). ಅಧಿಕಾರ ಮತ್ತು ಹಣದ ದರ್ಪದಲ್ಲಿ ಯಾರು ರಮೇಶನ ಕಣ್ಣಿಗೆ ಕಾಣುವುದೇ ಇಲ್ಲ. ದೇಸಾಯಿ ಮಾಡಿದಂತ ಸಮಾಜ ವಿರೋಧಿ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತೇನೆಂದು

ತೀರ್ಮಾನಿಸಿದಾಗ ಬಸವಣ್ಣನು ಸಹಜವಾಗಿ ಈ ಗುಂಪಿನಿಂದ ಹೊರಬರಲು ಪ್ರಯತ್ನಿಸುತ್ತಾನೆ. 'ದೇಸಾಯಿ ಪರಿ ಬಂದ ಕಣ್ಣುಗಳೇ ರಮೇಶನ ಮಾರ್ಯಾಗ ಮೂಡ್ಯಾವು'(ಪುಟ–೭೫) ಎಂದು ತಿಳಿದುಕೊಂಡು ಬಸವಣ್ಣನು ತನ್ನ ಮಾತನ್ನು ಮುಂದುವರಿಸುತ್ತಾ, 'ಈ ಮಹಾ ನವಮಿ ದಿವಸ ಮೇಣ್ ಮ್ಯಾಲ ಏಳಂಗಿಲ್ಲ, ಎರಡನೆಯದ್ದು ಮೂಲಿ ಮನೆ ನಿಂಗಪ್ಪನ ಸೊಸೆ ಈ ಬಂಗಲೆಕು ಬರಂಗಿಲ್ಲ,ಆ ವಾಡೆಕ್ಕು ಹೋಗಂಗಿಲ್ಲ, ಮೂರನೆಯದ್ದು ಮಹಾನವಮಿನಂತ್ರ ಈ ಇಬ್ಬರು ಊರಾಗ ಬಾಲ ಬಿಚ್ಚಂಗಿಲ್ಲ' (ಪುಟ–೭೬) ಹೀಗೆ ಬಸವಣ್ಣನು ತನ್ನ ವೈಚಾರಿಕ ಕ್ರಾಂತಿಕಾರಿಯ ನಿಲುವನ್ನು ನೇರವಾಗಿ ಪ್ರಕಟಪಡಿಸುತ್ತಾನೆ. ಈ ಬೆಳವಣಿಗೆಗಳನ್ನು ಬೆಂಬಲಿಸುವರು ನನ್ನ ಜೊತೆ ಕೈಜೋಡಿಸಿ ಹೋರಾಟಕ್ಕೆ ಬನ್ನಿ ಎಂದು ಸಾರುತ್ತಾ, ರಮೇಶ ಮತ್ತು ಇತರರನ್ನು ಧಿಕ್ಕರಿಸಿ ಪ್ರಗತಿಪರ ಧೋರಣೆಗೆ ಮುಂದಾಗುತ್ತಾನೆ.

ಹೀಗೆ ಎಂ.ಎಲ್.ಎ. ರಮೇಶನ ನವ ಬ್ರಾಹ್ಮಣಶಾಹಿತ್ವವನ್ನು ಗುರುತಿಸಿ, ಇಂಥ ಧೋರಣೆಗಳು ಸಮಸ್ತ ಸಮಾಜದ ಪ್ರಗತಿಗೆ ಮಾರಕವಾಗಿ ಪರಿಣಮಿಸುತ್ತವೆ. ಬೇರೆಯವರು ಯಾವುದೊಂದು ಕಾಲದಲ್ಲಿ ಅರವಿಲ್ಲದ ಜನಸಾಮಾನ್ಯರಿಗೆ ಅವರ ಮುಗ್ಧತೆಯನ್ನು ಉಪಯೋಗ ತೆಗೆದುಕೊಂಡು ಅನ್ಯಾಯ, ದರ್ಪ, ದೌರ್ಜನ್ಯದಂತಹ ಅನೀತಿಯನ್ನು ಅನುಸರಿಸಿದ್ದಾರೆ. ಇದರಿಂದ ಈಗ ಅರಿತುಕೊಂಡ ಸಮಾಜ ಮತ್ತು ವ್ಯಕ್ತಿಗಳಿಗೆ ಭಾರತದ ಸಂವಿಧಾನ ಶಕ್ತಿ ನೀಡಿದೆ. ಹೀಗಾಗಿ ಎಚ್ಚೆತ್ತುಕೊಂಡು ಅಸಮಾನತೆ, ಅನ್ಯಾಯ, ಭೇದಭಾವದ ವಿರುದ್ಧ ನೊಂದ ಜನರು ನ್ಯಾಯಯುತವಾಗಿ ಹೋರಾಟ ಮಾಡುವ ಸಂದರ್ಭದಲ್ಲಿ ಇದನ್ನು ಗಮನಿಸದೆ ಅಧಿಕಾರ ದೊರೆತ ತಕ್ಷಣ ಬೇರೆಯವರು ಮಾಡಿದ ಅನ್ಯಾಯ, ಅಮಾನವೀಯತೆಯನ್ನು ಮುಂದುವರೆಸಿಕೊಂಡು ಹೋಗುತ್ತೇನೆ ಎಂಬುದು ಯಾವ ನ್ಯಾಯ. ಇದು ಸೇಡು ಇಲ್ಲವೇ ದ್ವೇಷದ ನಡೆಯಾಗುತ್ತದೆ. ಇದರಿಂದ ಯಾರೂ ಕೂಡ ನೆಮ್ಮದಿ ಶಾಂತಿಯಿಂದ ಇರಲು ಸಾಧ್ಯವಿಲ್ಲವೆಂದು ಪರಿಪೂರ್ಣ ನಿರ್ಧಾರಕ್ಕೆ ಬರುತ್ತಾನೆ. ಯಾಕೆಂದರೆ ಬುದ್ದನು ನೀಡಿದ ಅನೇಕ ಸಂದೇಶದಲ್ಲಿ 'ವೈರದಿಂದ ವೈರ ಶಾಂತವಾಗುವುದಿಲ್ಲ ಅವೈರದಿಂದ ವೈರ ಶಾಂತನಾಗುತ್ತಾನೆ' ಎಂಬ ಸಂದೇಶವು ಒಂದಾಗಿದೆ. ಇಂತಹ ದಾರ್ಶನಿಕರ ತತ್ವ ಸಿದ್ಧಾಂತವನ್ನು ಅನುಸರಿಸಿ, ಅಳವಡಿಸಿಕೊಂಡು ಮತ್ತೆ ನಾವು ಅವರ ಮಾರ್ಗದಲ್ಲಿ ಹೋಗಿ ಅನ್ಯಾಯಕ್ಕೆ ಪ್ರತಿಕಾರ ತೀರಿಸಿಕೊಳ್ಳುತ್ತೇವೆ ಎಂದರೆ ಸಮಾಂಜಸ ನೀತಿಯಾಗದು ಎಂದು ನೀರ್ಬಿಡೆಯಿಂದ ಸಾರುತ್ತಾನೆ. ಮನುಷ್ಯರನ್ನು ಮನುಷ್ಯರಂತೆ ಕಾಣದ ಬ್ರಾಹ್ಮಣತ್ವದ ನಡೆಯನ್ನು ಧೈರ್ಯದಿಂದ ವಿರೋಧಿಸಿ ಈ ಗುಂಪಿಗೆ ಗುಡ್ ಬೈ ಹೇಳುತ್ತಾನೆ.

ಇತ್ತ ದೇಸಾಯಿ ತನ್ನ ಬಯಕೆ ತೀರಿಸಿಕೊಳ್ಳುವ ತವಕದಲ್ಲಿದ್ದಾನೆ.'ಏ ಆ ಗಂಗಿಗೆ ಕಲ್ಲಿಗೆ ಬಸ್ಯಾಗ ಹೇಳು ಮೂಲಿ ಮನಿ ನಿಂಗಪ್ಪನ ಸೊಸಿನ ತ್ವಾಟದ ಮನಿಯಾಗ ಕರಕೊಂಡ ನೀ ಇರು ಬೇಕಂದ್ರ ಒಂದು ನಾಲ್ಕು ಗಂಡಾಳ ಕಳಸತೇನಿ' (ಪುಟ–೮೦) ವಾಡೆದಾಗಿನ ಚಾಜ ಪದ್ಧತಿಯನ್ನು ಬಿಡದೆ,ಎಂ.ಎಲ್.ಎ. ಮತ್ತು ಊರಿನ ಜನರ ವಿರೋಧದ ನಡುವೆ ಈ ಕಾರ್ಯವನ್ನು ಪ್ರತಿಷ್ಠೆಯ ಕೆಲಸವೆಂದು ತಿಳಿದು ದರ್ಪದಿಂದ ಮುಂದುವರಿಯುತ್ತಾನೆ.

ಪ್ರಸ್ತುತ ಸಂದರ್ಭದಲ್ಲಿ ಕಾನೂನಾತ್ಮಕ ಹೋರಾಟಗಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯವಿರುವ ಕಾಲದಲ್ಲಿ ಮತ್ತು ಕಾನೂನಿನ ಭಯವಿಲ್ಲದೆ ನಡೆಯುವ ಇಂತಹ ಮೂರ್ಖರ ಅಟ್ಟಹಾಸಕ್ಕೆ ಅಂತ್ಯವಿಲ್ಲದಂತಾಗುತ್ತದೆ. ಆದರೆ ಕಾಯ್ದೆಗಳ ನೀಡುವ ವ್ಯಕ್ತಿ ಅಂತ ಶಕ್ತಿಯ ಅತ್ಯಂತ ಪರಿಣಾಮಕಾರಿಯಾದದ್ದು. ಜಮೀನ್ದಾರಿ ಮತ್ತು ಅಧಿಕಾರಿಶಾಹಿ ಮಂಡುತನದ ವ್ಯವಸ್ಥೆಯ ವಿರುದ್ಧ ಸಮಾನತೆಗಾಗಿ ಹೋರಾಡುವ ಈ ಮೂರನೇ ಶಕ್ತಿಯು ಅವರಿಗೆ ಸರಿ ಎನಿಸಿದ ತತ್ವವನ್ನು ಅಳವಡಿಸಿಕೊಂಡು ಹೋರಾಟವನ್ನು ನಡೆಸುತ್ತದೆ, ಮುನ್ನಡೆಯುತ್ತದೆ.

ದೇಸಾಯಿ ಮತ್ತು ರಮೇಶನ ಕಡೆಯವರು ಆಯುಧಗಳನ್ನು ಕೈಯಲ್ಲಿ ಹಿಡಿದುಕೊಂಡು ಊರಿನಲ್ಲಿ ತಯಾರಾಗ್ಯಾರ ಹರ್ಷದಿಂದ ಸಂಭ್ರಮದಿಂದ ಮಾರನವಮಿ ಹಬದಲ್ಲಿ ಬನ್ನಿ ಕೊಡಲು ಮನೆಯಿಂದ ಯಾರೂ ಬರುವಲ್ಲರು ಇದರಿಂದ ನೊಂದ ಬಸವಣ್ಣನು "ಹೆಂಗ್ ಬರುತ್ತಾರಪ್ಪ ಮನೆ ಬಿಟ್ಟ ಹೊರಗೆ ಊರ ಹತ್ತಿರ ಉರಿಯುವ ಮುಂದ ಮಂದಿ ಹೆಂಗ್ ಬರ್ತಾರೋ ಹೇಳು ಹಬ್ಬ ಮಾಡಾಕ ಯಾವ ಧರ್ಮ ಸಂಸ್ಕೃತಿ, ಮನುಷ್ಯರನ್ನ ಕೂಡಿಸಬೇಕಾಗಿತ್ತು ಅದೇ ಧರ್ಮ ಅದೇ ಸಂಸ್ಕೃತಿ ಮನುಷ್ಯ ಮನುಷ್ಯರನ್ನ ದೂರ ಮಾಡಾಕ ಹತ್ಯವು (ಪುಟ–೮೨) ಎಂದು ಧರ್ಮ ಸಂಸ್ಕೃತಿಯಿಂದ ಬೇಸತ್ತು ಪ್ರತಿರೋಧವನ್ನು ವ್ಯಕ್ತಪಡಿಸುತ್ತಾನೆ.

ಊರಿನಲ್ಲಿ ಕೈಮೀರಿ ಕೈ ಮೇಲಾಗುವ ಸಂದರ್ಭದಲ್ಲಿ ಬಸವಣ್ಣನ ಹೋರಾಟಕ್ಕೆ ಬೆಂಬಲವನ್ನು ನೀಡಲು ಸ್ವತಃ ಗಂಡನಾದ ದೇಸಾಯಿಯನ್ನು ಎದುರು ಹಾಕಿಕೊಂಡು ಸಾವಂತ್ರಿ, ಕಲ್ಲಿ, ನಿಂಗಪ್ಪ, ಮಗ, ಸೊಸೆ ಭಯದಿಂದ ಹಿಂದೆ ಮುಂದೆ ನೋಡುತ್ತಾ ಕೈಯಲ್ಲಿ ಕಂದಿಲು ಹಿಡಿದು ಬರುವರು (ಪುಟ–೮೩) ಆಗ ಸಾವಂತ್ರಿಯೂ ಬಸವಣ್ಣನಿಗೆ ಬಸವರಾಜ ಎಂದು ಸಂಭೋಧಿಸಿ ಗೌರವದಿಂದ ಕರೆದು (ಪುಟ–೮೩) ಇವರೆಲ್ಲರೂ ಬಸವಣ್ಣನ ನ್ಯಾಯ ಮಾರ್ಗದ ಹೋರಾಟಕ್ಕೆ ಬೆಂಬಲಿಸುತ್ತಾರೆ. ಆದರೆ ಇತರೆ ಇನ್ನಿತರೆ ಜನರಿಗೆ ಇದು ಅರ್ಥವಾಗುತ್ತಿಲ್ಲ ಅಂತವರನ್ನು ಕಂಡು ದೇಸಾಯಿ ಮತ್ತು ರಮೇಶನ ಮಧ್ಯೆ ಮುಗ್ದರು ಬಲಿಪಶುಗಳಾಗುತ್ತಿರುವುದಕ್ಕೆನೊಂದ ಮನದಾಳದ ದುಃಖ ಅವನದಾಗಿದೆ. ಆದುದರಿಂದ ಈ ದೇಸಾಯಿ ಮತ್ತು ರಮೇಶನ ದುರಹಂಕಾರಕ್ಕೆ ಇವರೆಲ್ಲ ಬಲಿಯಾಕರಲ್ಲ ಅನ್ನೋ ಸಂಕಟ ನನಗೆ ನಿಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿ ಐತಿ ಬಡವರು ಧರ್ಮದ ನಿಷೇದಾಗ, ರೊಕ್ಕದ ಆಶೆಕ ಇವತ್ತು ಆತ್ಮಹತ್ಯೆ ಮಾಡಿಕೊಳ್ಳಕ ಹತ್ತಾರು. (ಪುಟ–೮೩). ಆ ಇಬ್ಬರ ವ್ಯಕ್ತಿಗಳನ್ನು ಮನಪೂರ್ವಕವಾಗಿ ನಂಬಿದ್ದ ವ್ಯಕ್ತಿಗಳು ಏನು ಅರಿಯದ ಮನುಷ್ಯರು ಶಿಕ್ಷೆಯನ್ನು ಅನುಭವಿಸುವಂತಹ ಸ್ಥಿತಿಯು ಅವನಿಗೆ ತಡೆಯಲಾಗುವುದಿಲ್ಲ. ಆದರೂ ಇದು ನಿಂತು ವಿಚಾರ ಮಾಡುವಂತಹ ಮತ್ತು ಅನುಕಂಪದ ಮಾತುಗಳೆಲ್ಲ ಸಮಯವನ್ನು ಕಳೆಯುವಂತಹ

ಸಂದರ್ಭವಲ್ಲವೆಂದು, ತಕ್ಷಣ ಈ ಎಲ್ಲ ಜನರ ನೆರವಿಗೆ ಬರುತ್ತಾರೆ. ಆಗ ನಿಂಗಪ್ಪಜ್ಜನು ಯಪ್ಪಾ ತಮ್ಮ ಬಸವಣ್ಣ ನೀನು ಮಗನ ಸಮಾನಪ ಇವತ್ತು ನಮ್ಮ ಕಣ್ಣು ತರಿಸಿದೆ ದೇವರು (ಪುಟ–೮೭) ಎಂದು ಮನಸಾರೆ ಹರಿಸಿ ಶ್ಲಾಘಿಸುತ್ತಾನೆ.

ಸಾವಂತ್ರಿಯೊ ಅನ್ಯಾಯದಿಂದ ಆಕ್ರಮದಿಂದ ದೌರ್ಜನ್ಯ ಕೊಳಗಾದ ಜನರಿಗೆ ಸಾಂತ್ವನವನ್ನು ಹೇಳುತ್ತಾ, ಅರಿವು ತರುವಂತ ಪ್ರಯತ್ನವನ್ನು ಮಾಡುತ್ತಾಳೆ. ಕೈಯಲ್ಲಿ ಬಡಗಿ ಆಯುಧಗಳನ್ನು ಹಿಡಿದುಕೊಂಡು ಈ ಜನರಿಗೆ "ತಿಳಿಸಿ ಹೇಳಾಕ ನಾವು ಬಂದಿವೆ, ಭೂಮಿ ಮೇಲೆ ವಿಚಾರ ಮಾಡು ಪ್ರಾಣಿ ಅಂದ್ರೆ ಮನುಷ್ಯ ಪ್ರಾಣಿ ಒಂದೇ, ಅದರಾಗ ಎರಡೇ ಎರಡು ಜಾತಿ ಒಂದು ಹೆಣ್ಣು ಮಕ್ಕಳದು, ಇನ್ನೊಂದು ಗಂಡು ಮಕ್ಕಳದ್ದು. ಈ ಶ್ರೀಮಂತಿಕೆ ಅಧಿಕಾರ ಸಂದೇಶದ ಮಾತು ಶರಣರಿಂದ ಪ್ರಭಾವಿತವಾದ ಸಂಸ್ಕಾರಯುತವಾಗಿದೆ. ತಾಳೆ ಕಟ್ಟದ ಗಂಡ ದರ್ಪದ ವಿರುದ್ಧ ಬಡ ಜನರನ್ನ ಕಟ್ಟಿಕೊಂಡು ಅವರಿಗೆ ನ್ಯಾಯವನ್ನು ಅರಿವನ್ನು ತುಂಬುವ ಮಹತ್ವದ ಕಾರ್ಯವು ಈ ಕಾಲಘಟ್ಟದ ಈ ಕಾಲಘಟ್ಟದ ಅಭೂತಪೂರ್ವ ಬದಲಾವಣೆ ಎಂದೇ ನಾಟಕಕಾರರು ನಾಟಕದಲ್ಲಿ ತರುವ ಸನ್ನಿವೇಶದ ಆಶಯವಾಗಿ ಗೋಚರಿಸುತ್ತದೆ.

ಸಾವಿತ್ರಿ ಮತ್ತು ಬಸವಣ್ಣನವರ ಈ ಮಹತ್ವದ ವ್ಯಕ್ತಿಗಳ ಪ್ರೇರಣೆ ಮತ್ತು ಪ್ರಭಾವಕೊಳಗಾಗಿ ಅವರ ನಡೆ–ನುಡಿಗಳಲ್ಲಿ ಸತ್ಯಂ ಶಿವ ನಿಸ್ವಾರ್ಥವನ್ನು ಅರಿತು ತಮ್ಮ ಕೈಯಲ್ಲಿದ್ದ ಆಯುಧಗಳನ್ನು ಇವರ ಕಾಲುಗಳ ಅಡಿಯಲ್ಲಿ ಹಾಕುತ್ತಾರೆ. ಈ ಜನರ ಮನಸ್ಸು ಬದಲಾಗಿದ್ದನ್ನು ಕಂಡು ಎಲ್ಲರನ್ನು ಪ್ರೀತಿಯಿಂದ ಮನಸಾರೆ ಅಪ್ಪಿಕೊಂಡು "ಮುಂದಿನ ದಿನಗಳಲ್ಲಿ ಈ ಊರಾಗ ಅಷ್ಟೇ ಅಲ್ಲ ಭೂಮಿ ಮ್ಯಾಗನ ರಮೇಶನಂತವರು ಯಾರು ನಿಮ್ಮನ್ನ ಏನು ಮಾಡೋದಿಲ. ನಿಮ್ ಬಡತನ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆ, ಇಚ್ಛಾಶಕ್ತಿ ಇದ್ರೆ ಸಾಕು ಗೆಲ್ತಿರಿ. ನೀವು ಈ ಬಾಳಿನ ಯುದ್ಧದಾಗ ಈ ಸಮಾಜದಲ್ಲಿ ಎಂಬ ಬದುಕಿನ ಮಾರ್ಗವನ್ನು ಅನುಸರಿಸುವ ಅನುಭವದ ನೀತಿಯನ್ನು ಎಲ್ಲರಿಗೂ ಹೇಳಿ ವಿದ್ಯೆಯನ್ನು ಪಡೆದು ಸ್ವತಂತ್ರವಾಗಿ ಚಿಂತಿಸಿ ಬದುಕುವ ರೀತಿಯು ಮಾರ್ಮಿಕವಾಗಿದೆ.

ಈ ಭಾವುಕ ಮತ್ತು ಅರಿವಿನ ಸಂದರ್ಭದಲ್ಲಿ ಕಲ್ಲಿ, ದ್ವೇಷ ಮತ್ತು ಅಸೂಯೆಯಲ್ಲಿ ಮರೆತು ಹೋದ ಮಾನವಮಿ ಹಬ್ಬವನ್ನು ನೆನಪಿಸಿ. ಇಲ್ಲಿ ನೋಡ್ರಿ ಆ ಕುಡುಗೋಲು ಬಿಸಾಕ್ರಿ ಈ ಬನ್ನಿ ತಗೋರಿ (ಪುಟ–೯೮) ಎಂದು ಪರಸ್ಪರ ವಿರೋಧಿಗಳಂತೆ ವರ್ತಿಸುತ್ತಿದ್ದಾಗ ಎರಡು ಗುಂಪುಗಳಿಗೆ ಪ್ರೀತಿ ಮತ್ತು ಆತ್ಮೀಯತೆಯ ಭಾವನೆಯನ್ನು ತುಂಬುವಂತೆ ಮಾಡುತ್ತಾಳೆ. ಹೀಗೆ ನಾಟಕದಲ್ಲಿ ಮೂಡಿಬರುವ ಅನೇಕ ಪಾತ್ರಗಳು ಮಾನವೀಯತೆ ಮತ್ತು ಅನ್ಯಾಯದ ವಿರುದ್ಧ ಪ್ರತಿಭಟಿಸಿ ಅಸಾಯಕರಿಗೆ ಆಗುವಂತಹ ದುರಂತವನ್ನು ತಪ್ಪಿಸುವ ಕಾರ್ಯದಲ್ಲಿ ತಲ್ಲೀನವಾಗಿವೆ.

ಹೀಗೆ ಡಾ. ಮಲ್ಲಿಕಾ ಘಂಟಿಯವರು ಪರಂಪರಾಗತವಾಗಿ ನಡೆದು ಬಂದಿರುವ ಜಮೀನ್ದಾರಿ ಸಂಸ್ಕೃತಿಯ ದಬ್ಬಾಳಿಕೆಯನ್ನು ಆಧುನಿಕ ಸಂದರ್ಭದಲ್ಲಿ ಕೊನೆಗೆ ಆಲೋಚನೆಯ ವಸ್ತುವು ನಾಟಕದ ಪ್ರಕಾರಕ್ಕೆ ಮೌಲ್ಯವನ್ನು ತರುತ್ತದೆ. ಸಾವಂತ್ರಿ, ಕಲ್ಲಿ ಮತ್ತು ರುದ್ರಮ್ಮನಂಥವರ ಪಾತ್ರಗಳು ಸ್ತ್ರೀಯರ ಮೇಲಾಗುವ ಅನ್ಯಾಯದ ವಿರುದ್ಧ ಹೋರಾಡಲು ಪ್ರೇರಕರಾಗಿ ಸ್ಫೂರ್ತಿ ನೀಡುತ್ತವೆ.ಸ್ತ್ರೀವಾದ ಧೋರಣೆಯು ಪ್ರಾಚೀನದಿಂದ ನಮ್ಮ ಸಾಹಿತ್ಯ ಸಂಸ್ಕೃತಿಯಲ್ಲಿ ಪುರುಷ ಪ್ರಧಾನ ಸಮಾಜಕ್ಕೆ ಸವಾಲೆಸೆದು ತನ್ನ ಅಸ್ತಿತ್ವದಲ್ಲಿ ಬಾಳಿ ಬದುಕಿದೆ. ಅಧುನಿಕವಾಗಿ ಮಹಿಳೆಯರ ಮೇಲಾಗುವ ದುರಂತವನ್ನು ತಡೆಯಲು ಪ್ರತಿಯೊಬ್ಬರು ಸ್ವಾರ್ಥವನ್ನು ನೋಡದೆ ನ್ಯಾಯದ ಪರವಾದ ಹೋರಾಟದ ಬೆಂಬಲಕ್ಕೆ ನಿಲ್ಲಲು ಸ್ಫೂರ್ತಿದಾಯಕವಾಗಿದೆ. ಬಡವರಾಗಲಿ ಶ್ರೀಮಂತರಾಗಲಿ ಯಾವುದೇ ಸಮುದಾಯದವರಾಗಲಿ ಹೆಣ್ಣಿನ ಗೌರವಕ್ಕೆ ಧಕ್ಕೆ ಬಂದರೆ ಸ್ತ್ರೀ ಸಮಾಜ ಕೆರಳಿ ನಿಲ್ಲಬೇಕಾದ ಅನಿವಾರ್ಯತೆ ಇದೆ ಎಂಬುದನ್ನು ಸಾವಂತ್ರಿಯೂ ಸಾರಿ ಹೇಳುತ್ತಾಳೆ. ಇಂತಹ ಅನೇಕ ಸ್ತ್ರೀ ಸಂವೇದನೆಯಿಂದ ನಾಟಕವು ವೈಚಾರಿಕ ಪ್ರಜ್ಞೆಯನ್ನು ಹುಟ್ಟು ಹಾಕುತ್ತದೆ.

### ಆಧಾರ ಗ್ರಂಥ

೧. ಚಾಜ ನಾಟಕ,ಡಾ. ಮಲ್ಲಿಕಾ ಘಂಟಿ, ಗೌತಮ ಪ್ರಕಾಶನ, ಬಳ್ಳಾರಿ–೨೦೧೫.